# ನಗರಸಭಾ ಕಾರ್ಯಾಲಯ, ರಾಬರ್ಟ್ಸನ್‌ಪೇಟೆ, ಕೋಲಾರ ಚಿನ್ನದ ಗಣಿ ಪ್ರದೇಶ–563122

ಸಂಖ್ಯೆ:ನಸರಾ:ಶೇ.18:ಸಿಆರ್ 04:2008–09 ದಿನಾಂಕ: 02–09–2008

## :: ಅಲ್ಪಾವಧಿ ಟೆಂಡರ್ ಪ್ರಕಟಣೆ ::

ಕೆ.ಜಿ.ಎಫ್. ನಗರಸಭೆಯ ಶೇ.18ರ ಯೋಜನೆಯ 2008–09ನೇ ಸಾಲಿನಲ್ಲಿ ಅನುಷ್ಠಾನಕ್ಕಾಗಿ ಈ ಕೆಳಕಂಡ ಸಾಮಗ್ರಿಗಳನ್ನು ಖರೀದಿಸಬೇಕಾಗಿರುತ್ತದೆ ಆದ್ದರಿಂದ ಉತ್ಪಾದಕರು/ಅಧಿಕೃತ ಮಾರಾಟಗಾರರು/ಸರಬರಾಜುದಾರರು ತಮ್ಮ ಕಡಿಮೆ ಟೆಂಡರ್ ಬಿಡ್ ಮೊತ್ತವನ್ನು ಸಲ್ಲಿಸಬಹುದಾಗಿರುತ್ತದೆ.

| ಕ್ರ. ಸಂ. | ಸಾಮಗ್ರಿ /ತರಬೇತಿ ವಿವರ | ಟೆಂಡರ್‌ಗಿಟ್ಟ ಅಂದಾಜು ಮೊಬಲಗು | ಟೆಂಡರ್ ಫಾರಂ ಬೆಲೆ | ಇ.ಎಂ.ಡಿ. ಮೊತ್ತ |
|---|---|---|---|---|
| 01. | ಹೊಲಿಗೆ ಯಂತ್ರಗಳು | 8.558 ಲಕ್ಷ | **100–00** | **21000–00** |
| 02 | ಕಂಪ್ಯೂಟರ್ ತರಬೇತಿ | 2.108 ಲಕ್ಷ | **100–00** | **5000–00** |

1) ಟೆಂಡರ್ ಫಾರಂ ನೀಡುವ ದಿನಾಂಕ : 17–09–2008 ಸಂಜೆ 5–00 ಗಂಟೆಯವರೆಗೆ.
2) ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು ನಿಗಧಿತ ಇ.ಎಂ.ಡಿ.ಯೊಡನೆ ಸಲ್ಲಿಸಲು ಕಡೆ ದಿನಾಂಕ: 20–09–2008. ಸಂಜೆ 5.00 ಗಂಟೆಯವರೆಗೆ.

ಷರತ್ತುಗಳು:–

1) ಹೊಲಿಗೆ ಯಂತ್ರಗಳು:– ಉಷಾ/ ಮೆರಿಟ್/ ಸಿಂಗರ್ ಕಂಪನಿಯವರು, ಅಧಿಕೃತ ಮಾರಾಟಗಾರರು ಟೆಂಡರ್‌ನಲ್ಲಿ ಭಾಗವಹಿಸಬಹುದು.
2) ಕಂಪ್ಯೂಟರ್ ತರಬೇತಿ:– ಸರ್ಕಾರದಿಂದ ಅನುಮೋದನೆ ಪಡೆದಿರುವ ವಿದ್ಯಾಸಂಸ್ಥೆ ಮತ್ತು ಅಧಿಕೃತ ತರಬೇತಿ ಸಂಸ್ಥೆಗಳು ಟೆಂಡರ್‌ನಲ್ಲಿ ಭಾಗವಹಿಸಬಹುದು.
3) ಸಾಗಾಣಿಕೆ ವೆಚ್ಚಗಳನ್ನು ಸರಬರಾಜುದಾರರು ಭರಿಸಬೇಕು.
4) ಸರಬರಾಜುದಾರರ ಬಿಲ್ಲಿನಲ್ಲಿ ಸರ್ಕಾರಕ್ಕೆ ಪಾವತಿಸಬೇಕಾದ ಎಲ್ಲಾ ತೆರಿಗೆ ( ಆದಾಯಕರ, ವ್ಯಾಟ್) ಇತ್ಯಾದಿಗಳನ್ನು ಕಡಿತಗೊಳಿಸಿ ಬಾಕಿ ಮೊತ್ತವನ್ನು ಮಾತ್ರ ಸರಬರಾದಾರರಿಗೆ ನೀಡಲಾಗುವುದು (ಪಾವತಿಸಿದ್ದಲ್ಲಿ ಅಧಿಕೃತ ದಾಖಲೆ ಹಾಜರು ಪಡಿಸಬೇಕು).
5) ಇ.ಎಂ.ಡಿ. ಹಾಗೂ ಟೆಂಡರ್ ಪುಸ್ತಕ:– ಇದಕ್ಕಾಗಿ ನಿಗದಿ ಪಡಿಸಿರುವ ಮೊತ್ತಕ್ಕೆ ಪೌರಾಯುಕ್ತರು ನಗರಸಭೆ, ರಾಬರ್ಟ್ಸನ್‌ಪೇಟೆ, ಕೆ.ಜಿ.ಎಫ್ ಇವರ ಪದನಾಮದಲ್ಲಿ ಪಡೆದ ಡಿ.ಡಿ.ಯನ್ನು ಅಥವ ಕಛೇರಿಯಲ್ಲಿ ನಗದು ಪಾವತಿಸಿ ಅಧಿಕೃತ ರಸೀದಿಯ ಮೂಲಕ ನಿಗಧಿತ ಅವಧಿಯೊಳಗೆ ಪಾವತಿಸಿರಬೇಕು.
6) ಈ ಕಛೇರಿಗೆ ಬೇಕಾಗಿರುವ ಟೆಂಡರ್‌ನಲ್ಲಿನ ಸಾಮಗ್ರಿಗಳ ಕುರಿತು ಹೆಚ್ಚಿನ ವಿವರಗಳನ್ನು ಹಾಗು ಷರತ್ತುಗಳನ್ನು ಟೆಂಡರ್ ಪುಸ್ತಕದಲ್ಲಿ ವಿವರಿಸಲಾಗಿದೆ.
7) ಟೆಂಡರನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಸಂಪೂರ್ಣ ಅಧಿಕಾರವನ್ನು ಪೌರಾಯುಕ್ತರು ಪಡೆದಿರುತ್ತಾರೆ.

ಸಹಿ/–
ಅಧ್ಯಕ್ಷರು
ನಗರಸಭೆ
ರಾಬರ್ಟ್ಸನ್‌ಪೇಟೆ, ಕೆ.ಜಿ.ಎಫ್.

ಸಹಿ/–
ಪೌರಾಯುಕ್ತರು
ನಗರಸಭೆ
ರಾಬರ್ಟ್ಸನ್‌ಪೇಟೆ, ಕೆ.ಜಿ.ಎಫ್.